ಸಾಕ್ಷಿಗೆ ದಿನಾಂಕಃ **7.7.2026** ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು**.**

<u>ಮುಂದುವರೆದ ಪಾಟೀಸವಾಲು ಃ ವಾದಿ ಪರ ವಕೀಲರಿಂದ ಃ</u>

ನಿಪಿ-4 , 5 ಮತ್ತು 8 ಭಾವಚಿತ್ರಗಳಲ್ಲಿ ಕಂಡು ಬರುವ ಮನೆ ನನ್ನ ತಂದೆ ಕಟ್ಟಿದ್ದ ನಮ್ಮ ಕುಟುಂಬದ ಮನೆಯಾಗಿರುತ್ತದೆ. ನಿಪಿ-7 ಮತ್ತು 9 ಭಾವಚಿತ್ರಗಳಲ್ಲಿ ಕಂಡು ಬರುವ ಒಳಾಂಗಣ ಚಿತ್ರ ಸದರಿ ನನ್ನ ತಂದೆ ಕಟ್ಟಿದ್ದ ಮನೆಯೊಳಗಿನ ದೃಶ್ಯವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಅದನ್ನು ಒಪ್ಪಿರುತ್ತಾರೆ ಅದನ್ನು ನಿಪಿ-26 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ದಿನಾಂಕಃ 5.11.2020 ರಂದು ನಮ್ಮ ಕುಟುಂಬದ ಕಾರ್ಯಕ್ರಮದಲ್ಲಿ ತೆಗೆಯಲಾಗಿರುತ್ತದೆ ಎಂದರೆ ನನಗೆ ಅದನ್ನು ಈಗ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ನಾನು ನನ್ನ ಹೆಸರಿಗೆ ಹಕ್ಕು ಪತ್ರ ನೀಡಬೇಕೆಂದು ಯಾವ ದಿನಾಂಕದಂದು ಅರ್ಜಿ ಸಲ್ಲಿಸಿದೆ ಎಂದು ಈಗ ನೆನಪಿಲ್ಲ. ನಾನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದಾಗ ಯಾವ ಯಾವ ದಾಖಲೆಗಳನ್ನು ಅದರ ಜೊತೆ ಸಲ್ಲಿಸಿದೆ ಎಂದು ಈಗ ನೆನಪಿಲ್ಲ. ಕಲಂ 94(ಸಿ) ಅಡಿಯಲ್ಲಿ ಮನೆ ಮಂಜೂರಾತಿ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದೆ. ನಿಪಿ-21 ರಲ್ಲಿರುವ ಒಂದು ಭಾವಚಿತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಸದರಿ ಭಾವಚಿತ್ರದಲ್ಲಿರುವ ಮನೆ ತಮ್ಮ ಕುಟುಂಬದ ಹಳೆಯ ಮನೆಯಾಗಿತ್ತು ಎಂದು ನುಡಿಯುತ್ತಾರೆ. ನಾನು ನಿರ್ದಿಷ್ಟವಾಗಿ ಯಾವ ಮನೆಯನ್ನು ಅಕ್ರಮವಾಗಿ ನಿರ್ಮಾಣ ಮಾಡಿಕೊಂಡಿದ್ದೆ ಮತ್ತು ಸಕ್ರಮಕ್ಕಾಗಿ ಯಾವ ವಾಸದ ಮನೆಯನ್ನು ಸಕ್ರಮಗೊಳಿಸಲು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ್ದೆ ಎಂದು ಈಗ ನೆನಪಿಲ್ಲ. ನಿಪಿ-4 ರಲ್ಲಿರುವ ನಮ್ಮ ಹಳೆಯ ಮನೆಯ ಭಾವಚಿತ್ರವನ್ನು ಲಗತ್ತಿಸಿ ನಾನು ನನ್ನ ವಾಸದ ಮನೆಯ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ನನಗೆ ಗೊತ್ತಿಲ್ಲ. 1998 ನೇ ಇಸವಿಯಲ್ಲಿ ನನ್ನ ಮದುವೆಯಾದ ನಂತರ ಸುಮಾರು 1999-2000 ಇಸವಿಯಲ್ಲಿ ನಾನು ಮತ್ತು ನನ್ನ ಸಂಸಾರ ಪ್ರತ್ಯೇಕವಾಗಿ ವಾಸ ಮಾಡಲು ಪಕ್ಕದಲ್ಲಿ ಒಂದು ಕೊಟ್ಟಿಗೆ ಮನೆಯನ್ನು ನಿರ್ಮಾಣ ಮಾಡಿಕೊಂಡು

ಬಂದಿದ್ದೇವು ಆ ಮನೆಯನ್ನು ಸಕ್ರಮಗೊಳಿಸಲು ನಾನು ಅರ್ಜಿಯನ್ನು ಸಲ್ಲಿಸಿದ್ದೆ. ಸದರಿ ಮನೆಯ ವಿಸ್ತೀರ್ಣ 10x15 ಆಗಿರುತ್ತದೆ. ನಾನು ನಮ್ಮ ಕುಟುಂಬದ ಮನೆಯನ್ನು ಸಕ್ರಮಗೊಳಿಸಲು ನನ್ನ ಹೆಸರಿನಲ್ಲಿ ಅರ್ಜಿಯನ್ನು ನೀಡಿ ಕುಟುಂಬದ ಇತರೆ ಸದಸ್ಯರಿಗೆ ಸದರಿ ಮನೆಯ ಮೇಲೆ ಹಕ್ಕು ವಂಚಿತರನ್ನಾಗಿ ಮಾಡಿರುತ್ತೇನೆಂದರೆ ಸರಿಯಲ್ಲ. ನಮ್ಮ ಕುಟುಂಬದ ಮನೆಯ ವಿದ್ಯುಚ್ಛಕ್ತಿ ಆರ್ ಆರ್ ನಂಬರ್ ವಾದಿಯ ಹೆಸರಿನಲ್ಲಿತ್ತು. ಪ್ರಸ್ತುತ ಸದರಿ ಮನೆಯ ವಿದ್ಯುಚ್ಛಕ್ತಿ ಸಂಪರ್ಕ ಕಡಿತಗೊಂಡಿರುವುದಿಲ್ಲ. ನಾನು ಸದರಿ ಕುಟುಂಬದ ಮನೆಯ ವಿದ್ಯುಚ್ಛಕ್ತಿ ಸಂಪರ್ಕವನ್ನು ಕಡಿತಗೊಳಿಸಲು ವಾದಿಯ ಸಹಿಯನ್ನು ಪೋರ್ಜರಿ ಮಾಡಿ ಸಂಪರ್ಕ ಕಡಿತಗೊಳಿಸುವಂತೆ ವಿದ್ಯುತ್ ಸರಬರಾಜು ಇಲಾಖೆಗೆ ಅರ್ಜಿಯೊಂದಿಗೆ ಒಂದು ಬಾಂಡ್ ಪೇಪರನ್ನು ಸಹ ನೀಡಿರುತ್ತೇನೆಂದರೆ ಸರಿಯಲ್ಲ. ನನ್ನ ವಿರುದ್ಧ ವಾದಿಯು ಸಂಬಂಧಪಟ್ಟ ಇಲಾಖೆಗಳಲ್ಲಿ ಸದರಿ ಕೃತ್ಯಗಳ ಬಗ್ಗೆ ದೂರನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕುಟುಂಬದ ಮನೆಯನ್ನು ಕೆಡವಬಾರದೆಂದು ಇದೇ ನ್ಯಾಯಾಲಯದಿಂದ ನನ್ನ ವಿರುದ್ಧ ಪ್ರತಿಬಂದಕಾಜ್ಞೆ ಆದೇಶವನ್ನು ಹೊರಡಿಸಿರುತ್ತದೆ ಎಂದರೆ ಸರಿ. ನಾನು ಕೋವಿಡ್-19 ಸಂದರ್ಭದಲ್ಲಿ ಜಾರಿಯಲ್ಲಿದ್ದ ಎಸ್ ಓ ಪಿ ಗಳನ್ನು ದುರುಪಯೋಗಪಡಿಸಿಕೊಂಡು ನಮ್ಮ ಕುಟುಂಬದ ಮನೆಯನ್ನು ನೆಲಸಮ ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಕುಟುಂಬದ ಮನೆ ಇರಲಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಿನಾಂಕಃ 31.5.1996 ರ ಪಾಲುಪಟ್ಟಿ ವಿಭಾಗಪತ್ರದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ದಾಖಲೆಯನ್ನು ನಿಪಿ-27 ಎಂದು ಗುರುತಿಸಲಾಯಿತು. ಸದರಿ ನಿಪಿ-27 ರ ಪ್ರಕಾರ ನಮ್ಮ ಕುಟುಂಬದ ಮನೆಯ ಹಕ್ಕು ನನಗೆ ವಾದಿಗೆ ಮತ್ತು ನನ್ನ ಅಣ್ಣ ವೆಂಕಟೇಶ್ ರವರಿಗೆ ಸಮಾನ ಹಕ್ಕು ಇದೆ ಎಂದು ಬರೆಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ವಿಭಾಗಪತ್ರ ಕಾರ್ಯಗತಗೊಳ್ಳಲಿಲ್ಲ ಎಂದು ನುಡಿಯುತ್ತಾರೆ. ದಾವಾ ಬಿ ಶೆಡ್ಯೂಲ್ ಆಸ್ತಿಯನ್ನು ನಿಪಿ-27 ರ ಪ್ರಕಾರ ವಾದಿಗೆ ನೀಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ವಿಭಾಗಪತ್ರ ಕಾರ್ಯಗತಗೊಳ್ಳಲಿಲ್ಲ ಎಂದು ನುಡಿಯುತ್ತಾರೆ. ನಿಪಿ-27 ಕ್ಕೆ

ಪಕ್ಷಕಾರರಾಗಿ ನಾನು, ವಾದಿ, ವೆಂಕಟೇಶ್, ಪುಟ್ಟಸ್ವಾಮಿ, ತಿಮ್ಮಣ್ಣ ಮತ್ತು ರವಿಕುಮಾರ್ ಹಾಗೂ ಸಾಕ್ಷಿದಾರರಾಗಿ ಜೆ ಎಲ್ ಸದಾಶಿವ, ಸುಂದರೇಶ,ಸೋಮೇಗೌಡ, ಸೋಮಯ್ಯ ಮುಂತಾದವರು ಸಹಿ ಮಾಡಲಾಗಿರುತ್ತಾರೆಂದರೆ ಸರಿ. ನಿಪಿ-27 ರ ವಿಭಾಗಪತ್ರದ ಅನುಸಾರ ಅದರ ಪಕ್ಷಕಾರರು ಅದನ್ನು ಕಾರ್ಯಗತಗೊಳಿಸಿ ಅವರ ಹಿಸ್ಸೆಗೆ ಬಂದ ಜಮೀನುಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವವನ್ನು ಹೊಂದಿರುತ್ತಾರೆಂದರೆ ಸರಿಯಲ್ಲ.

ನಿಪಿ-27 ರ ಪ್ರಕಾರ ದಾವಾ ಶೆಡ್ಯೂಲ್ ಬಿ ಆಸ್ತಿಯು ವಾದಿಯ ಹಿಸ್ಸೆಗೆ ಬಂದಿದ್ದರೂ ಸಹ ಸದರಿ ವಾದಿಯು ಶಿವಮೊಗ್ಗದಲ್ಲಿ ವಾಸವಾಗಿರುವ ಕಾರಣ ಸಂದರ್ಭವನ್ನು ದುರುಪಯೋಗಪಡಿಸಿಕೊಂಡು ಬಿ ಶೆಡ್ಯೂಲ್ ಆಸ್ತಿಯನ್ನು ಲಪಟಾಯಿಸಲು ಪ್ರಯತ್ನಪಟ್ಟಿರುತ್ತೇನೆಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯ ಮೇಲೆ ನನಗೆ ಯಾವುದೇ ಹಕ್ಕು ಸ್ವಾಧೀನತೆ ಇರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಜಾಗವೇ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಈ ಪ್ರಕರಣಗಳಲ್ಲಿ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಬಿ ಶೆಡ್ಯೂಲ್ ಆಸ್ತಿಯ ಸಂಪೂರ್ಣ ಹಕ್ಕು ಮತ್ತು ಸ್ವಾಧೀನತೆಯನ್ನು ವಾದಿಯು ಹೊಂದಿರುತ್ತಾರೆ ಮತ್ತು ಸದರಿ ಬಿ ಶೆಡ್ಯೂಲ್ ಆಸ್ತಿಗೆ ನಾನು ಅತಿಕ್ರಮ ಪ್ರವೇಶ ಮಾಡಲು ಅವಕಾಶ ಇರುವುದಿಲ್ಲ ಎಂದರೆ ಸಾಕ್ಷಿಯು ವಾದಿಗೆ ನಾನು ನಿರ್ಮಾಣ ಮಾಡಿರುವ ಮನೆಗೆ ಬರಲು ಅವಕಾಶವಿರುವುದಿಲ್ಲ ಎಂದು ನುಡಿಯುತ್ತಾರೆ.

ಃಮರುವಿಚಾರಣೆ ಇಲ್ಲಃ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ